# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 186 (240)
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 22.09.2020
ಉತ್ತರಿಸಬೇಕಾದ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

| ಪ್ರಶ್ನೆ | | ಉತ್ತರ |
|---|---|---|
| ಅ) | ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; (ಪ್ರತ್ಯೇಕವಾಗಿ ವಿವರ ನೀಡುವುದು) | ಪ್ರಸ್ತುತ ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕ ಸಂಖ್ಯೆ ಈ ಕೆಳಕಂಡಂತಿದೆ.<br><br>1. ಖಾಯಂ ಪೌರಕಾರ್ಮಿಕ ಸಂಖ್ಯೆ – 570<br>2. ಹೊರಗುತ್ತಿಗೆ ಪೌರಕಾರ್ಮಿಕ ಸಂಖ್ಯೆ - 1578 |
| ಆ) | ಪ್ರತಿದಿನ ಸದರಿ ಪೌರ ಕಾರ್ಮಿಕರು ನಿರ್ವಹಿಸುವ ಕಾರ್ಯಗಳಾವುವು ; | ಪ್ರತಿನಿತ್ಯ ಪೌರಕಾರ್ಮಿಕರು ಮನೆ ತ್ಯಾಜ್ಯ ಸಂಗ್ರಹಣೆ, ರಸ್ತೆ ಸ್ವಚ್ಛತೆ, ಮೋರಿಗಳ ಸ್ವಚ್ಛತೆ, ಖಾಲಿ ನಿವೇಶನಗಳ ಸ್ವಚ್ಛತಾಕಾರ್ಯವನ್ನು ನಿರ್ವಹಿಸುತ್ತಿದ್ದಾರೆ |
| ಇ) | ಪ್ರತಿದಿನ ಎಷ್ಟು ಸಮಯ ಕಾರ್ಯನಿರ್ವಹಿಸುತ್ತಾರೆ ; ಇವರಿಗೆ ನೀಡಲಾಗುತ್ತಿರುವ ಮಾಸಿಕ ವೇತನ ಮೊತ್ತವೆಷ್ಟು ; ಹಾಗೂ ಚೆಕ್ ಮೂಲಕ ವೇತನ ಪಾವತಿಸಲಾಗುತ್ತಿದೆಯೇ ; (ಪ್ರತ್ಯೇಕವಾಗಿ ವಿವರ ನೀಡುವುದು) | ಪ್ರತಿನಿತ್ಯ ಬೆಳಿಗ್ಗೆ 6 ಗಂಟೆಯಿಮದ ಮಧ್ಯಾಹ್ನ 2 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಾರೆ. ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಮೂಲ ವೇತನ+VDA ಸೇರಿ ರೂ. 15121.20 + ಇಎಸ್‌ಐ (3.25 %) + ಪಿಎಫ್ (13.00%) ವಂತಿಗೆ ಸೇರಿಸಿ ಮಾಸಿಕ ವೇತನವನ್ನು ಗುತ್ತಿಗೆದಾರರ ಮೂಲಕ ಪೌರಕಾರ್ಮಿಕರ ಖಾತೆಗೆ ಜಮಾ ಮಾಡಲಾಗುತ್ತಿದೆ ಹಾಗೂ 570 ಮಂದಿ ಖಾಯಂ ಪೌರ ಕಾರ್ಮಿಕರಿಗೆ ಅವರ ವೇತನ ಶ್ರೇಣಿಗೆ (ರೂ. 17,000 - 28,950) ಅನುಗುಣವಾಗಿ ಪೌರಕಾರ್ಮಿಕರ ಖಾತೆಗೆ ಜಮಾ ಮಾಡಲಾಗುತ್ತಿದೆ. |
| ಈ) | ಸದರಿಯವರಿಗೆ ನೀಡಲಾಗುತ್ತಿರುವ ವಿಶೇಷ ಸವಲತ್ತುಗಳೇನು ; ವಿವರ ನೀಡುವುದು) | **<u>ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ನೀಡುತ್ತಿರುವ ಸವಲತ್ತುಗಳು ಈ ಕೆಳಕಂಡಂತಿವೆ.</u>**<br><br>1. ಖಾಯಂ ಪೌರಕಾರ್ಮಿಕರಿಗೆ ಸರ್ಕಾರದ ಆದೇಶಗಳನ್ವಯ ಆಯಾ ಕಾಲಕ್ಕೆ ನೀಡುವ ಎಲ್ಲ ಸವಲತ್ತುಗಳನ್ನು ಹಾಗೂ ವೇತನವನ್ನು ನೀಡಲಾಗುತ್ತಿದೆ.<br>2. ಹಬ್ಬ ಹಾಗೂ ಸಾರ್ವತ್ರಿಕ ರಜೆಗಳಲ್ಲಿಯೂ |

ಕಾರ್ಯನಿರತರಾಗಿರುವ ನೌಕರರಿಗೆ ವಾರ್ಷಿಕ 21 ದಿನಗಳ ವಿಶೇಷ ವೇತನ ನೀಡಲಾಗುತ್ತಿದೆ.

3. ಪೌರಕಾರ್ಮಿಕರ ಅನಾರೋಗ್ಯ ನಿಮಿತ್ತ ಆಸ್ಪತ್ರೆಗೆ ದಾಖಲಾದಲ್ಲಿ ಚಿಕಿತ್ಸೆಗಾಗಿ ರೂ. 1 ಲಕ್ಷಗಳ ಮುಂಗಡ ಹಣವನ್ನು ಸಂಬಂಧಪಟ್ಟ ಆಸ್ಪತ್ರೆಗೆ ಪಾವತಿಸಿ, ಉಳಿದ ವೈದ್ಯಕೀಯ ವೆಚ್ಚವನ್ನು ರೋಗಿಯು ಬಿಡುಗಡೆಯಾದ ನಂತರ ಕೆ.ಸಿ.ಎಸ್. ನಿಯಮ (ವೈದ್ಯಕೀಯ ಹಾಜರಾತಿ ನಿಯಮಗಳು) 1963, ರನ್ವಯ ವೈದ್ಯಕೀಯ ವೆಚ್ಚದ ಮರು ಪಾವತಿ ಮಾಡಲಾಗುತ್ತದೆ.
4. ಪೌರಕಾರ್ಮಿಕರಿಗೆ ಸುರಕ್ಷಾ ಧಿರಿಸುಗಳನ್ನು (ಕೈ ಕವಚ / ಗಂ ಬೂಟ್ಸ್ / ಮಾಕ್ಸ್ ) ನೀಡಲಾಗುತ್ತಿದೆ. ದಸರಾ ಹಬ್ಬದ ಪ್ರಯುಕ್ತ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾಕಾರ್ಯ ನಿರ್ವಹಿಸುತ್ತಿರುವ ಪುರುಷ ಖಾಯಂ ಪೌರಕಾರ್ಮಿಕರಿಗೆ ಪ್ಯಾಂಟ್, ಶರ್ಟ್, ಏಪ್ರಾನ್ ಮತ್ತು ಮಹಿಳಾ ಖಾಯಂ ಪೌರಕಾರ್ಮಿಕರಿಗೆ ಸೀರೆ, ಏಪ್ರಾನ್ ನೀಡಲಾಗಿದೆ.
5. ಖಾಯಂ ಹಾಗೂ ಹೊರಗುತ್ತಿಗೆ ಪೌರಕಾರ್ಮಿಕರು ಸೇರಿದಂತೆ ಎಲ್ಲಾ ಪೌರಕಾರ್ಮಿಕರಿಗೂ ಹೆಪಟೈಟೀಸ್ ಬಿ ಚುಚ್ಚುಮದ್ದು ನೀಡಲು ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಕ್ಯಾನ್ಸರ್ ತಪಾಸಣೆ (PAP SMEAR TEST) ಮಾಡಲು ಕ್ರಮವಹಿಸಲಾಗುತ್ತಿದೆ ಹಾಗೂ ಮೈಸೂರು ನಗರದ ಪ್ರತಿಷ್ಠಿತ ಆಸ್ಪತ್ರೆಗಳಿಂದ ಸಾಮಾನ್ಯ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತಿದೆ.

**<u>ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರಿಗೆ ನೀಡುತ್ತಿರುವ ಸವಲತ್ತುಗಳು ಈ ಕೆಳಕಂಡಂತಿವೆ.</u>**

1. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಮೂಲ ವೇತನ ರೂ. 15121.20+VDA+16.25% ಇಎಸ್ಐ ಮತ್ತು ಪಿಎಫ್ ವಂತಿಕೆ ಸೇರಿಸಿ ಮಾಸಿಕ ವೇತನವನು ಗುತ್ತಿಗೆದಾರರ ಮೂಲಕ ಪೌರಕಾರ್ಮಿಕರ ಖಾತೆಗೆ ಜಮಾ

ಮಾಡಲಾಗುತ್ತಿದೆ.

2. ಪ್ರತಿಯೊಬ್ಬ ಪೌರಕಾರ್ಮಿಕರಿಗೆ ಸುರಕ್ಷಾ ಧಿರಿಸುಗಳಾದ ಗಮ್‌ಬೂಟ್ಸ್, ಕೈಚೀಲ, ಮುಖಕವಚ ಹಾಗೂ ಯೂನಿಫಾರಂಗಳನ್ನು ನೀಡಲಾಗಿದೆ.
3. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾದ ಬಿಜಿಎಸ್ ಅಪೋಲೋ ಆಸ್ಪತ್ರೆಯಲ್ಲಿ ವರ್ಷಕ್ಕೆ ಎರಡು ಬಾರಿ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಲಾಗುತ್ತಿದೆ.
4. ಹೊರಗುತ್ತಿಗೆ ಪೌರಕಾರ್ಮಿಕರುಗಳ ಆರೋಗ್ಯ ತಪಾಸಣೆಯಲ್ಲಿ ಕಂಡು ಬಂದ ಖಾಯಿಲೆಗಳಿಗೆ ಇ.ಎಸ್.ಐ ಮೂಲಕ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

**<u>ಶೇಕಡ 24.10ರ ಮೀಸಲು ಅನುದಾನದಲ್ಲಿಪೌರಕಾರ್ಮಿಕರು ಗಳಿಗೆ ನೀಡಲಾಗುತ್ತಿರುವ ವೈಯಕ್ತಿಕ ಸೌಲಭ್ಯಗಳು ಈ ಕೆಳಕಂಡಂತಿವೆ.</u>**

1. ಪೌರಕಾರ್ಮಿಕರ ಕುಟುಂಬದವರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು ಗರಿಷ್ಠರೂ. 1.50 ಲಕ್ಷದವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.
2. ಪೌರಕಾರ್ಮಿಕರುಗಳಿಗೆ ವೈದ್ಯಕೀಯತಪಾಸಣೆ ಶಿಬಿರ ನಡೆಸಲಾಗುತ್ತಿದೆ.
3. ಪೌರಕಾರ್ಮಿಕ ಮಕ್ಕಳ ಶಿಕ್ಷಣ ಹಾಗೂ ಉನ್ನತ ವ್ಯಾಸಂಗಕ್ಕೆ ಶಾಲಾ ಶುಲ್ಕವನ್ನು ಮರು ಪಾವತಿ ಮಾಡಲಾಗುತ್ತಿದೆ.
4. ಪೌರಕಾರ್ಮಿಕ ಕುಟುಂಬಗಳಿಗೆ ಉಚಿತವಾಗಿ ಗ್ಯಾಸ್ ಸಂಪರ್ಕ ಮತ್ತು ಹೊಲಿಗೆ ಯಂತ್ರಗಳನ್ನು ಹಾಗೂ ಎಂಬ್ರಾಯಿಡರಿ ಯಂತ್ರಗಳನ್ನು ವಿತರಿಸಲಾಗಿದೆ.
5. ಪೌರಕಾರ್ಮಿಕ ಕುಟುಂಬಗಳಿಗೆ ಮನೆ ರಿಪೇರಿಗಾಗಿ ರೂ. 20,000/-ಗಳನ್ನು ನೀಡಲಾಗುತ್ತಿದೆ.
6. ಪೌರಕಾರ್ಮಿಕರಿಗೆ ಪಕ್ಕಾ ಮನೆ ನಿರ್ಮಾಣಕ್ಕೆ ಸಹಾಯಧನವಾಗಿ ರೂ. 3.00 ಲಕ್ಷಗಳನ್ನು ನೀಡಲಾಗುತ್ತಿದೆ.
7. ಹೆಚ್ಚು ಅಂಕಗಳಿಸಿದ ಪೌರಕಾರ್ಮಿಕ ಕುಟುಂಬದವರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ

ಪ್ರೋತ್ಸಾಹಧನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

- ಎಸ್.ಎಸ್.ಎಲ್.ಸಿ, ಐ.ಟಿ.ಐ. ಮತ್ತು ಇತರೆ ವೃತ್ತಿಪರ ತರಗತಿ - ಪ್ರತೀ ವಿದ್ಯಾರ್ಥಿಗೆ ರೂ. 3000/-.
- ಪಿ.ಯು.ಸಿ. / ಡಿಪ್ಲೋಮೋ / ಇತರೆ ಪ್ಯಾರ ಮೆಡಿಕಲ್ ಕೋರ್ಸ್ / ಡಿಪ್ಲೋಮಾ / ಡಿ.ಇಡಿ, / ಸಿ.ಪಿ.ಇಡಿ ಇತರೆ ತಾಂತ್ರಿಕ ತರಗತಿಗಳಿಗೆ - ರೂ. 4500/-.
- ಬಿ.ಎ / ಬಿ.ಎಸ್ಸಿ / ಬಿಕಾಂ / ಇತರೆ ಪದವಿ ಬಿ.ಇಡಿ. / ಬಿ.ಪಿ.ಇಡಿ / ಇತರೆ ಡಿಪ್ಲೋಮ - ರೂ. 6000/-.
- ಎಂ.ಇಡಿ / ಎಂಪಿಇಡಿ - ರೂ. 9000/-.
- ಎಂ.ಎ. / ಎಂ.ಎಸ್ಸಿ. ಎಂ.ಕಾಂ. / ಎಂ.ಎಸ್.ಡಬ್ಲ್ಯೂ. / ಎಂ.ಸಿಎ. / ಬಿ.ಇ. -ರೂ. 15000/-.
- ಇತರೆ ಇನ್ನಾವುದೇ ಸ್ನಾತಕೋತ್ತರ ಪದವಿ - ರೂ. 10,000/-.
- ಎಂ.ಬಿ.ಬಿ.ಎಸ್. / ಬಿ.ಎಡ್ / ಎಂ.ಟೆಕ್ / ಎಂ.ಎಸ್ / ಎಂ.ಡಿ / ಎಂ.ಇ. - ರೂ. 25,000/-.
- ಪಿ.ಹೆಚ್‌ಡಿ. / ಪೋಸ್ಟ್ ಡಾಕ್ಟರೇಟ್ - ರೂ. 30,000/-.

8. ಪೌರಕಾರ್ಮಿಕರಿಗೆ ನಿವೇಶನ ಖರೀದಿಗೆ ರೂ. 3.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.
9. ಪೌರಕಾರ್ಮಿಕರ ಕುಟುಂಬದವರು ಬಿ.ಇ & ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಾಗಿದ್ದಲ್ಲಿ ಲ್ಯಾಪ್‌ಟಾಪ್ ನೀಡಲಾಗುತ್ತಿದೆ.
10. ಪೌರಕಾರ್ಮಿಕರ ಕುಟುಂಬದವರು ಎಲ್.ಎಲ್.ಬಿ ಪದವೀಧರರಾಗಿದ್ದಲ್ಲಿ ಕಾನೂನು ಪುಸ್ತಕಗಳನ್ನು ಖರೀದಿಸಲು ರೂ. 20,000/- ಗಳನ್ನು ನೀಡಲಾಗುತ್ತಿದೆ.
11. ಪೌರಕಾರ್ಮಿಕರ ಮಕ್ಕಳಿಗೆ ಉಚಿತವಾಗಿ COMPUTER & SPOKEN ENGLISH ತರಬೇತಿ ನೀಡಲಾಗುತ್ತಿದೆ.
12. ಪೌರಕಾರ್ಮಿಕರ ಮನೆಗಳಿಗೆ ಶೌಚಾಲಯ ನಿರ್ಮಾಣಕ್ಕೆ ರೂ. 5,000/- ಗಳನ್ನು ನೀಡಲಾಗುತ್ತಿದೆ.
13. ಪೌರಕಾರ್ಮಿಕರಿಗೆ ಉಚಿತವಾಗಿ ವಿಮೆ

| | | |
|---|---|---|
| | | ಸೌಲಭ್ಯವನ್ನು ಎಸ್.ಬಿ.ಐ ಬ್ಯಾಂಕ್‌ನಿಂದ ಮಾಡಿಸಲಾಗಿದೆ. |
| ಉ) | ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸಲು ನಿಯಮ ರೂಪಿಸಲಾಗಿದೆಯೇ ? | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ/ ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸುವ ಸಂಬಂಧದಲ್ಲಿ (ಒಂದು ಬಾರಿಗೆ ಮಾತ್ರ) ಅಧಿಸೂಚನೆ ಸಂಖ್ಯೆ: ನಅಇ 129 ಎಂಎನ್‌ಇ 2017, ದಿನಾಂಕ 05.12.2017 ರಲ್ಲಿ ನೇಮಕಾತಿ ಕುರಿತಂತೆ ನಿಯಮಗಳನ್ನು ರೂಪಿಸಲಾಗಿದೆ. |

ನಅಇ 85 ಎಸಿಎಂ 2020 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು